ನೃತ್ಯವಿದೆ ಎಂಬುದನ್ನು ಗುರುತಿಸಿ ನನ್ನ ಬದುಕನ್ನು ಆಸ್ಥೆಯಿಂದ ರೂಪಿಸುತ್ತಿದ್ದಳು.

ಅಷ್ಟೊಂದು ಲವಲವಿಕೆಯಿಂದ ಇದ್ದ ಕ್ವೀನ್ಸ್ ಮೇರಿ ಕಾಲೇಜಿನಲ್ಲಿದ್ದಾಗಲೇ ದೇಶ ವಿಭಜನೆಯ ಸುದ್ದಿ ಬಂತು. ಅಪಾಯದ ದಿನಗಳು ಬರಬಹುದು ಎಂಬ ನಿರೀಕ್ಷೆಯಲ್ಲಿಯೇ ಹಲವರು ಕಾಲೇಜಿನಿಂದ ಮನೆಗೆ ತೆರಳಿದರು. 1945ರಲ್ಲಿ ಆ ಕಾಲೇಜಿನಿಂದ ಹೊರ ಹೋಗುವಂತೆ ಎಲ್ಲರಿಗೂ ಅಧಿಕೃತ ಆದೇಶ ಮಾಡಲಾಗಿತ್ತು. ಪ್ರತಿದಿನ ವಿಮಾನವು ಬಂದು, ಜನರನ್ನು ಹೊತ್ತೊಯ್ಯುತ್ತಿತ್ತು. ಹಿಂದೂಗಳೆಲ್ಲ ಲಾಹೋರ್ ನಗರದಿಂದ ಕುಟುಂಬ ಸಮೇತ ಗುಂಪು ಗುಂಪಾಗಿ ಓಡಿ ಹೋದರು. ಅನೇಕ ಮುಸ್ಲಿಂ ಕುಟುಂಬಗಳು ಬೇರೆ ಬೇರೆ ಕಡೆಯಿಂದ ಅಲ್ಲಿಗೆ ಸ್ಥಳಾಂತರಗೊಂಡವು. ನಾನೂ ಅಲ್ಲಿಂದ ಹೊರಡಬೇಕಿತ್ತು. ಆ ಗಡಿಬಿಡಿಯಲ್ಲಿ ಫೋಟೋಗಳು, ಪುಸ್ತಕಗಳು, ನೆನಪಿನ ವಸ್ತುಗಳನ್ನು ಹೊತ್ತೊಯ್ಯುವಷ್ಟು ಅವಕಾಶವಾದರೂ ಎಲ್ಲಿತ್ತು? ನಾನು ಕಾಲೇಜಿಗೆ ಹೋಗುವಾಗ ದೊಡ್ಡ ಟ್ರಂಕು ಕೊಂಡೊಯ್ದಿದ್ದೆ. ಮರಳಿ ಬರುವಾಗ ಪುಟ್ಟ ಪೆಟ್ಟಿಗೆಯಷ್ಟೇ ನನ್ನ ಬಳಿಯಿತ್ತು. ಮರಳುವಷ್ಟರಲ್ಲಿ ಅದಾಗಲೇ ದೇಶದಲ್ಲಿ ಗಲಭೆ ಆರಂಭವಾಗಿತ್ತು. ವಿಭಜನೆಯ ನಂತರ ಆ ಶಾಲೆ ಪೂರ್ತಿಯಾಗಿ ಪಾಳು ಬಿದ್ದುಬಿಟ್ಟಿತು. ಈಗ ಅದು ಕಾರ್ಯನಿರ್ವಹಿಸುತ್ತಿದೆಯಾದರೂ ಹಳೆಯ ವೈಭವ ಇಲ್ಲವೇನೋ.

**◆ ಸಿನಿಮಾಗಳಿಗೆ ಕೆಲಸಮಾಡಿದ ಅನುಭವ ಹೇಗಿತ್ತು?**

ಹೆಚ್ಚು ಸಿನಿಮಾಗಳಿಗೆ ನಾನು ಕೆಲಸ ಮಾಡಿದ್ದಿಲ್ಲ. 'ಉಮ್ರಾವ್ ಜಾನ್' ಸಿನಿಮಾದಲ್ಲಿ ರೇಖಾಜಿಗೆ ನೃತ್ಯ ಹೇಳಿಕೊಡುವಂತೆ ನನಗೆ ಮೊತ್ತ ಮೊದಲ ಬಾರಿಗೆ ಮುಝಾಫರ್ ಅಲಿ ಅವರು ಕರೆ ಮಾಡಿ ಹೇಳಿದ್ದರು. ಆ ಸಂದರ್ಭದಲ್ಲಿ ಶಾಟ್‌ಗಳಿಗೆ ಕಾಯುತ್ತಿದ್ದ ನೆನಪುಗಳಿವೆ. ಆಗೆಲ್ಲ ಸಿಬ್ಬಂದಿ ವರ್ಗಕ್ಕೂ ಹೊಸ ಅನುಭವ. ಸಿನಿಮಾ ಎಂದರೆ ನನಗೆ ಕಾಯುವಿಕೆಯ ನೆನಪು ಮತ್ತು ಶಾಟ್‌ಗಳನ್ನು ಬೇರೆ ಬೇರೆ ಕಡೆಗಳಲ್ಲಿ ತೆಗೆಯುವುದಕ್ಕಾಗಿ ಹಲವು ಕಡೆಗೆ ಪ್ರಯಾಣಿಸುತ್ತಿದ್ದ ನೆನಪು ಮರುಕಳಿಸುವುದು. 'ಉಮ್ರಾವ್ ಜಾನ್' ಯಶಸ್ಸು ಕಂಡನಂತರ ನನಗೆ ಹಲವು ಚಿತ್ರಗಳಿಗೆ ಕೆಲಸ ಮಾಡುವ ಅವಕಾಶಗಳು ಬಂದವು. ಆದರೆ ಸಿನಿಮಾಗಳಿಗೆ ಕೊರಿಯೊಗ್ರಫಿ ಮಾಡುವ ವಿಚಾರವೇ ಹೆಚ್ಚು ಆಸಕ್ತಿದಾಯಕವಾಗಿ ಕಾಣಿಸಲಿಲ್ಲ. 'ಸುರ್ ಸಂಗಮ್' ಚಿತ್ರಕ್ಕೆ ನೃತ್ಯ ಸಂಯೋಜಿಸಲು ಕೆ. ವಿಶ್ವನಾಥ್‌ಜಿ ಕೂಡ ಆಹ್ವಾನಿಸಿದ್ದರು. ಆ ಸಿನಿಮಾ ಹಿಟ್ ಆದಂತಿಲ್ಲ. ಮುಝಾಫರ್ ಅಲಿ ಅವರು ಆಪ್ತರಾದ್ದರಿಂದ ಅವರ ಸಿನಿಮಾಕ್ಕಾಗಿ ಕೆಲಸ ಮಾಡಿದ್ದುಂಟು.

**◆ ನೀವು ಸ್ಥಾಪಿಸಿದ ಸಂಸ್ಥೆಗೆ 'ಕದಂಬ' ಎಂಬ ಹೆಸರಿಡಲು ನಿರ್ದಿಷ್ಟ ಕಾರಣವೇನಾದರೂ ಇದೆಯೇ?**

1965ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸುವಾಗ ಯಾವ ಹೆಸರಿಡಬೇಕು ಎಂದು ಬಹಳ ಯೋಚಿಸಿದೆ. ಶಾಸ್ತ್ರೀಯ ನೃತ್ಯ ಪರಂಪರೆಯಲ್ಲಿ ಎರಡು ಧಾರೆಗಳಿವೆ. ಒಂದು ಶಿವನ ನೃತ್ಯ, ಇನ್ನೊಂದು ಕೃಷ್ಣನ (ವಿಷ್ಣು) ನೃತ್ಯ. ಅಥವಾ ಹೀಗೆ ಹೇಳಬಹುದು. ನಮ್ಮ ನೃತ್ಯಪ್ರಕಾರದ ಮೇಲೆ ಶೈವ ಮತ್ತು ವೈಷ್ಣವ ತತ್ತ್ವದ ಪ್ರಭಾವ ಬಹಳವಿದೆ. ಹಾಗೆ ನೋಡಿದರೆ ನಮ್ಮ ಗುರುಗಳು ಹೇಳುವ ಪ್ರಕಾರ, ನಾವು ಮಾಡುವ ಈ ನೃತ್ಯಕ್ಕೆ 'ನಟ್ವರಿ ನೃತ್ಯ' ಎಂದೇ ಹೇಳುವುದು ಸೂಕ್ತ. ನಟವರ ಎಂದರೆ ಕೃಷ್ಣನೇ ಅಲ್ಲವೇ. ಕೃಷ್ಣನು ಕದಂಬ ವೃಕ್ಷದಡಿಯಲ್ಲಿ ನೃತ್ಯ ಮಾಡಿದ ಕಥೆಯನ್ನು ನಾವು ಹೇಳುತ್ತೇವೆ. ಕೃಷ್ಣನಿಗೇ ನೆರಳು ಕೊಟ್ಟ, ನರ್ತಿಸಲು ಪ್ರೇರಣೆ ಕೊಟ್ಟ ಕದಂಬ ವೃಕ್ಷದ ಹೆಸರನ್ನೇ ನಮ್ಮ ಹೊಸ ಸಂಸ್ಥೆಗೆ ಇಡೋಣವೆಂದು ತೀರ್ಮಾನಿಸಿದೆವು.

**◆ ನೀವು ರೂಪಿಸಿದ ಧಬ್‌ಕರ್ ನೃತ್ಯ ಪ್ರಸ್ತುತಿ, ಅಮೂರ್ತವನ್ನು ಅಭಿವ್ಯಕ್ತಿಸುವ ಒಂದು ಪ್ರಯತ್ನ. ಅದು ಆ ಕಾಲಕ್ಕೆ ಬಹಳ ಕ್ರಾಂತಿಕಾರಿಯಾಗಿತ್ತು ಎಂದು ಕೇಳಿದ್ದೇವೆ. ನಿಮ್ಮೊಳಗೆ ಆ ಪರಿಕಲ್ಪನೆ ರೂಪುಗೊಂಡಿದ್ದು ಹೇಗೆ?**

ಭಾರತೀಯ ಕಲಾಕೇಂದ್ರದಲ್ಲಿದ್ದಾಗ ನಾವು ಅನೇಕ ನೃತ್ಯಪಟುಗಳು ಹತ್ತಾರು ರೀತಿಯ ಕಥಕ್ ನೃತ್ಯ ಪ್ರಸ್ತುತಪಡಿಸುತ್ತಿದ್ದೆವು. ಇತರ ನೃತ್ಯಗಳನ್ನೂ ಮಾಡುತ್ತಿದ್ದೆವು. ಹೀಗೆ ಪ್ರತಿದಿನ ನರ್ತಿಸುವಾಗ ನನ್ನೊಳಗೆ ಅನೇಕ ವಿಚಾರಗಳು ಹಾದುಹೋಗುತ್ತಿದ್ದವು.